## ಖಿನ್ನನಾದ ಹೃತಿಕ್

ಬಾಲಿವುಡ್‌ನಲ್ಲಿ ಉಕ್ಕಿನಂತೆ ಹುರಿಗಟ್ಟಿಸಿದ ದೇಹ, ಎಲಾಸ್ಟಿಕ್‌ನಂತೆ ಬಾಗಿಸಬಲ್ಲ ಅವಯವಗಳನ್ನು ಹೊಂದಿರುವ ಹೃತಿಕ್ ರೋಷನ್ ಕೂಡಾ ಖಿನ್ನತೆಯ ಸಂಕಟಕ್ಕೆ ಸಿಲುಕಿದ್ದನಂತೆ. ಇದನ್ನು ಸ್ವತಃ ಹೃತಿಕ್ ಬಹಿರಂಗ ಪಡಿಸಿದ್ದಾನೆ. ತನ್ನ ಖಿನ್ನತೆಗೆ ವೃತ್ತಿ ಮತ್ತು ಖಾಸಗಿ ಬದುಕಿನ ಏರಿಳಿತವೇ ಕಾರಣ ಎಂದು ಆತ ಹೇಳಿಕೊಂಡಿದ್ದಾನೆ.

'ಎಲ್ಲರಿಗೂ ಆಗುವಂತೆ ನಿರ್ಧಾರದ ಗೊಂದಲವನ್ನೂ ಎದುರಿಸಿದ್ದಿದೆ. ಇದೆಲ್ಲವೂ ಸಹಜ ಸಂಗತಿ. ಈ ಬಗ್ಗೆ ಮಾತನಾಡುವಾಗ ಅತಿ ಗಂಭೀರ ಎಂದು ಪರಿಗಣಿಸಬಾರದು. ಖಿನ್ನತೆ ಮತ್ತು ಗೊಂದಲಗಳು ಅಂತಹ ದೊಡ್ಡ ವಿಚಾರಗಳೇನೂ ಅಲ್ಲ' ಎನ್ನುವುದು ಹೃತಿಕ್ ಅಭಿಪ್ರಾಯ.

'ನನ್ನ ವೈಯಕ್ತಿಕ ಬದುಕಿನಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಿದ್ದೇನೆ. ನಾವೆಲ್ಲರೂ ಬದುಕಿನ ಏರಿಳಿತಗಳೊಂದಿಗೆ ಸಾಗುತ್ತೇವೆ. ಈ ಏರಿಳಿತಗಳೆರಡೂ ಬಹುಮುಖ್ಯ. ಏಕೆಂದರೆ ಅವುಗಳ ಮಧ್ಯೆಯಿಂದ ನಾವು ನಮ್ಮನ್ನು ಹೊರತರಬೇಕು. ನೀವು ಬದುಕಿನಲ್ಲಿ ಕುಸಿದು ಹೋದ ಸನ್ನಿವೇಶದಲ್ಲಿ ನಮ್ಮಲ್ಲಿ ನಮ್ಮ ಧ್ಯೇಯ ಮತ್ತು ಗುರಿಯ ಸ್ಪಷ್ಟತೆ ಇರುವುದು ಬಹಳ ಮುಖ್ಯ. ಈ ಸಂದರ್ಭದಲ್ಲಿ ಮನಸ್ಸು ನಮ್ಮ ನಿಯಂತ್ರಣ ಮೀರಿ ಅನಗತ್ಯ ಯೋಚನೆಗಳನ್ನು ತುಂಬುತ್ತದೆ. ಈ ವೇಳೆಯಲ್ಲಿ ನಿಮಗೆ ವಾಸ್ತವದ ಅಗತ್ಯವಿರುತ್ತದೆ. ಮತ್ತೊಬ್ಬರು ನಿಮ್ಮನ್ನು ನೋಡಿ 'ಇದು ನಿಮ್ಮಲ್ಲಿ ಆಗುತ್ತಿದೆ' ಎಂದು ಹೇಳಬೇಕು. ಆಗಲೇ ನಮ್ಮೊಳಗೆ ಘಟಿಸುತ್ತಿರುವ ಸಮಸ್ಯೆಗಳ ಅರಿವು ನಮಗಾಗುವುದು' ಎಂದು ಅನುಭವ ಹಂಚಿಕೊಂಡಿದ್ದಾನೆ ಹೃತಿಕ್.

ತನ್ನಂತೆಯೇ ಮೌನವಾಗಿ ಖಿನ್ನತೆ ಮತ್ತು ಇತರೆ ಮಾನಸಿಕ ಸಮಸ್ಯೆಗಳ ವಿರುದ್ಧ ಹೋರಾಡಿದ ಅನೇಕ ಸ್ನೇಹಿತರನ್ನು ಕಂಡಿರುವುದಾಗಿ ಆತ ಹೇಳಿಕೊಂಡಿದ್ದಾನೆ. 'ಹೊಟ್ಟೆ ಅಥವಾ ದೇಹದ ಇತರೆ ಭಾಗಗಳ ನೋವಿಗೆ ಸಹಜವಾಗಿ ಸ್ಪಂದಿಸುತ್ತೇವೆ. ಆದರೆ ಮೆದುಳಿನ ವಿಚಾರದಲ್ಲಿ ಏಕೆ ಈ ತಳಮಳ?' ಎನ್ನುವುದು ಆತನ ಪ್ರಶ್ನೆ.

ಅಂದ ಹಾಗೆ, ಹೃತಿಕ್ ತನ್ನ ಖಿನ್ನತೆಗೆ ಕಾರಣವಾದ ಸಂಗತಿಯನ್ನು ಮಾತ್ರ ಬಹಿರಂಗಪಡಿಸಿಲ್ಲ.





## ನೇಹಾ ಬೇಸರ

ಆರಂಭದ ಚಿತ್ರಗಳಲ್ಲಿಯೇ ಗುರುತಿಸಿಕೊಳ್ಳುವಂತಹ ಪಾತ್ರ ಪಡೆದುಕೊಳ್ಳುವ ನಟಿಯರ ಸಂಖ್ಯೆ ತೀರಾ ವಿರಳ. ಕಂಗನಾ ರನೋಟ್, ವಿದ್ಯಾ ಬಾಲನ್ ಮುಂತಾದ ನಟಿಯರು ಜನಪ್ರಿಯತೆಯ ಉತ್ತುಂಗಕ್ಕೆ ತಲುಪಿದ ಬಳಿಕವಷ್ಟೇ ಅವರಿಗೆ ಪ್ರಯೋಗಾತ್ಮಕ ಪಾತ್ರಗಳು ದೊರೆತದ್ದು. ಉತ್ತಮ ಪ್ರತಿಭೆಯ ನಟಿಯರ ವೃತ್ತಿ ಬದುಕು ಆರಂಭದಲ್ಲಿಯೇ ಕಮರಿ ಹೋಗುವುದು ಕೆಟ್ಟ ಪಾತ್ರಗಳ ಕಾರಣದಿಂದಾಗಿಯೇ. ಅವರಿಗೆ ಗುರುತಿಸಿಕೊಳ್ಳಲು ಸಾಧ್ಯವಾಗದಂತೆ ಈ ಪಾತ್ರಗಳು ತಡೆಯುತ್ತವೆ. ಅವಕಾಶಗಳಿಗೆ ಕಾಯುವ ಅವರಿಗೆ ಇಂತಹ ಪಾತ್ರಗಳು ಅನಿವಾರ್ಯ ಕೂಡ. ಹೀಗೆಂದು 'ಯಂಗಿಸ್ತಾನ್', 'ಜ್ಯಾಂತಭಾಯಿ ಕಿ ಲವ್ ಸ್ಟೋರಿ', 'ಕ್ಯಾ ಸೂಪರ್ ಕೂಲ್ ಹೈ ಹಂ' ಚಿತ್ರಗಳಲ್ಲಿ ನಟಿಸಿರುವ ನೇಹಾ ಶರ್ಮಾ ಈ ಬಗ್ಗೆ ತನ್ನ ಬೇಸರ ಹೊರಹಾಕಿದ್ದಾಳೆ.

ತನ್ನ ಪ್ರತಿಭೆಗೆ ತಕ್ಕಂತೆ ಯೋಗ್ಯವಾದ ಅವಕಾಶಗಳು ದೊರಕುತ್ತಿಲ್ಲ. ಈಗ ಸಿಕ್ಕಿರುವ, ಸಿಗುತ್ತಿರುವ ಅವಕಾಶಗಳು ಕಾತರವನ್ನೂ ಹುಟ್ಟಿಸುವುದಿಲ್ಲ, ತೃಪ್ತಿಯನ್ನೂ ನೀಡುವುದಿಲ್ಲ. ಹೀಗೆ ಬಂದ ಅವಕಾಶಗಳಲ್ಲಿಯೇ ಉತ್ತಮ ಎನಿಸಿದ್ದನ್ನು ಹೆಕ್ಕಿಕೊಂಡಿದ್ದಾಗಿ ನೇಹಾ ಹೇಳಿಕೊಂಡಿದ್ದಾಳೆ. ಇದರ ಮೂಲಕವೇ ತನ್ನ ವೃತ್ತಿ ಬದುಕಿನ ಮೆಟ್ಟಿಲನ್ನು ಏರಲು ಸಾಧ್ಯವಾಗುತ್ತದೆ ಎಂಬ ನಿರೀಕ್ಷೆ ಆಕೆಯದು.

'ಕಂಗನಾ ಮತ್ತು ವಿದ್ಯಾ ಬಾಲನ್‌ರಂತಹ ನಟಿಯರಿಗೆ ತಮಗೆ ಇಷ್ಟವಾದ ಪಾತ್ರವನ್ನು ಆಯ್ದುಕೊಳ್ಳಲು ನೂರಾರು ಅವಕಾಶಗಳು ಇರುತ್ತವೆ. ಅವೂ ಒಂದಕ್ಕಿಂತ ಒಂದು ಅದ್ಭುತವಾಗಿರುತ್ತವೆ. ಆದರೆ ಈಗಷ್ಟೇ ಸಿನಿಮಾ ರಂಗಕ್ಕೆ ಕಾಲಿಟ್ಟ ಮತ್ತು ಇನ್ನೂ ಗುರುತಿಸಿಕೊಳ್ಳದ ನಟಿಯರಿಗೆ ಈ ಆಯ್ಕೆ ಸಿಗುವುದು ಸಾಧ್ಯವಿಲ್ಲ. ಇಷ್ಟು ಸಿನಿಮಾ ಮಾಡಿದ ಬಳಿಕವೂ ನಾನು ಹೊರಗಿನವಳು ಎಂದೇ ಭಾವಿಸುತ್ತಿದ್ದೇನೆ. ಇಲ್ಲಿನ ಚಟುವಟಿಕೆಗಳು ಹೇಗೆ ನಿರ್ಧರಿತವಾಗುತ್ತವೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತಲೇ ಇದ್ದೇನೆ. ಆದರೆ ಅದು ಬಹಳ ಕಷ್ಟಕರ. ಇಷ್ಟಾಗಿಯೂ ಈ ಪಯಣ ವಿಶಿಷ್ಟ ಎನಿಸುತ್ತದೆ' ಎನ್ನುವುದು ನೇಹಾ ವದಾಂತ.

ಇನ್ನೇನು ನೇಹಾ ಹೊಸ ನಟರೊಂದಿಗೆ ನಟಿಸಿರುವ 'ತುಮ್ ಬಿನ್2' ನವೆಂಬರ್ 11ರಂದು ತೆರೆ ಕಾಣಲಿದೆ.

■ ಅಮಿ